# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 264/2023

| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |
|---|---|---|---|

ಸಾಕ್ಷಿದಾರರ ಹೆಸರು : ಪೂಜಾ

ತಂದೆಯ ಹೆಸರು : ಕರಿಬಸ್ಸಪ್ಪ

ವಯಸ್ಸು : 30 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 06.03.2026

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಮೈದೂರು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನನಗೆ ಆರೋಪಿತರು ಪರಿಚಯ. 22.11.2022 ರಾತ್ರಿ 8 ಗಂಟೆಗೆ ನಾನು ಮನೆಯ ಹತ್ತಿರ ಕುಳಿತಿರುವಾಗ ಆರೋಪಿತರು ಏಕಾ ಏಕಿ ಬಂದು ನನ್ನ ಹತ್ತಿರ ಜಗಳ ಮಾಡಿರುತ್ತಾರೆ. ಕೆಟ್ಟ ಪದಗಳಿಂದ ನನಗೆ ಬೈದಿರುತ್ತಾರೆ. ನನ್ನ ಗಂಡ ಆರಣಿ ಕರಿಬಸ್ಸಪ್ಪ ರವರನ್ನು ಹಿಡಿದುಕೊಂಡು ಹೊಡೆದಿರುತ್ತಾರೆ. ಕುಬೇರಪ್ಪ ನನ್ನ ಗಂಡನಿಗೆ ಕಬ್ಬಿಣದ ರಾಡ್ ನಿಂದ ತಲೆಯ ಮಧ್ಯೆ ಭಾಗಕ್ಕೆ ಹೊಡೆದಿರುತ್ತಾರೆ. ಮೊಣಕಾಲಿಗೆ ಹೊಡೆದಿರುತ್ತಾರೆ ಎಡಭುಜ ಎಡ ತೋಳುಗೆ ಹೊಡೆದು ಬಾಯಿಯಿಂದ ಕಚ್ಚಿರುತ್ತಾರೆ. ಬಿಡಿಸಲು ಬಂದ ದೇವೆನೀಂದ್ರಪ್ಪನಿಗೆ ಸಾಯಿಸುತ್ತೇನೆ ಅಂತಾ ಹೆದರಿಸಿ ದೇವರಾಜ ಅವರ ತಲೆಗೆ ಕಬ್ಬಿಣದ ರಾಡ್ ನಿಂದ ಹೊಡೆದಿರುತ್ತಾರೆ. ದೇವೇಂದ್ರಪ್ಪನ ಕೈ ತೋಳಿಗೂ ಕಚ್ಚಿರುತ್ತಾರೆ. ದೊಡ್ಡ ಕೆಂಚಪ್ಪ ಬಿಡಿಸಲುಬಂದಾಗ ಸುವರ್ಣಮ್ಮ ಕೈಯಿಂದ ಗುದ್ದಿ ಗಾಯಪಡಿಸಿರುತ್ತಾರೆ. ಕೆಂಪೆಗೌಡ ಪರಮೇಶ್ವರಪ್ಪ ಬಂದು ಜಗಳ ಬಿಡಿಸಿರುತ್ತಾರೆ. ಆಗ ಸುವರ್ಣಮ್ಮ ನಿಮ್ಮನ್ನು ಜೀವಂತ ಬಿಡುವುದಿಲ್ಲಾ ಅಂತಾ ಬೆದರಿಕೆ ಹಾಕಿರುತ್ತಾರೆ. ನಂತರ ನಾವು ಹರಪನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ದಾವಣಗೆರೆ ಆರೈಕೆ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ಮರು ದಿನ ಚಿಗಟೇರಿ ಪೋಲೀಸ ಠಾಣೆಯಲ್ಲಿ ದೂರು ಕೊಟ್ಟಿರುತ್ತೇವೆ. ದೂರನ್ನು ನಿ ಪಿ 1 ಎಂದು, ಸಾಕ್ಷಿ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು.

ಸಿ ಸಿ ನಂಬರ 264/2023

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಪೋಲೀಸರು ನಂತರ ಸ್ಥಳಕ್ಕೆ ಬಂದು ಚಾ ಸಾ 2 ಮತ್ತು ಚಾ ಸಾ 3 ರವರ ಸಮಕ್ಷಮ ಅಲ್ಲಿ ಬಿದ್ದಿದ್ದ ಕಬ್ಬಿಣದ ಸಲಾಕೆಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಪಂಚನಾಮೆ ನಿ ಪಿ 2 ಎಂದು, ಸಾಕ್ಷಿ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. 11 ರಿಂದ 12 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ. ಸ್ಥಳದಲ್ಲಿ ಒಂದು ಪೋಟೋ ತೆಗೆದಿರುತ್ತಾರೆ. ದಿನಾಂಕ 26.11.2022 ರಂದು ಪೋಲೀಸ ಠಾಣೆಗೆ ಹೋಗಿ ಕರಿಬಸ್ಸಪ್ಪನ ದೇವೇಂದ್ರಪ್ಪನ ಬಟ್ಟೆಯನ್ನು ಪೋಲೀಸರಿಗೆ ಕೊಟ್ಟಿರುತ್ತಾರೆ. ಪೋಲೀಸರು ಆಗ ಕೂಡ ಒಂದು ಪೋಟೋ ತೆಗೆದಿರುತ್ತಾರೆ. ಆಗ ಸುರೇಶ ಮತ್ತು ಮಂಜುನಾಥ ಹಾಜರಿದ್ದರು. 1.15 ರಿಂದ 2.15 ರವರೆಗೆ ಕ್ರಮಜರೂಗಿಸಿರುತ್ತಾರೆ. ಜಪ್ತು ಪಂಚನಾಮೆ ನಿ ಪಿ 3 ಎಂದು, ಸಾಕ್ಷಿ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಎರಡು ಕಬ್ಬಿಣದ ಸರಳನ್ನು ಮು ಮಾ 1 ಮತ್ತು 2 ಅಂತಾ ಗುರುತಿಸಲಾಯಿತು. ಠಾಣೆಯಲ್ಲಿ ಜಪ್ತುಪಡಿಸಿಕೊಂಡ ರಕ್ತಕಲೆ ಇರುವ 8 ಬಟ್ಟೆಗಳನ್ನು ಒಟ್ಟಾರೆಯಾಗಿ ಮು ಮಾ 3 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರತಿಸುತ್ತೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ ಆರ್ ಜಿ ವಕೀಲರಿಂದಃ-**

ದೂರು ಕೊಡಲು ಪೋಲೀಸ ಠಾಣೆಗೆ ನಾನು ಮತ್ತು ನನ್ನ ಚಿಕ್ಕಪ್ಪ ಅರವಿಂದಗೌಡ ಹೋಗಿದ್ದರು. ಕೆಂಪೇಗೌಡ ಮತ್ತು ಪರಮೇಶ್ವರಪ್ಪ ಅರವಿಂದಗೌಡ ನನ್ನ ಗಂಡನ ವಿಶ್ವಾಸಿಕರು ಎಂದರೆ ಸರಿ. ಗಣೇಶಪ್ಪ ದ್ಯಾಮನಗೌಡ ಸುರೇಶ್ ಮಂಜುನಾಥ ವಿರುಪಾಕ್ಷಪ್ಪ ವಿಜಯಕುಮಾರ ಇವರು ಸಹ ನಮ್ಮ ಓಣಿಯವರು ಎಂದರೆ ಸರಿ. ಸದರಿಯವರು ನನ್ನ ಗಂಡನ ವಿಶ್ವಾಸಿಕರು ಎಂದರೆ ಸರಿಯಲ್ಲ. ಊರಮ್ಮನ ಕಟ್ಟೆಯಲ್ಲಿ ನನ್ನ ಗಂಡ ಗಣೇಶಪ್ಪ ದ್ಯಾಮನಗೌಡ ಸುರೇಶ್

| ಸಿಡಬ್ಲೂ | 1 | ಪಿಡಬ್ಲೂ | 1 |
|---|---|---|---|

ಮಂಜುನಾಥ ವಿರುಪಾಕ್ಷಪ್ಪ ವಿಜಯಕುಮಾರ ಪ್ರತಿನಿತ್ಯಾ ಮಾತನಾಡುತ್ತಾ ಕುಳಿತುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಒಬ್ಬರಿಗೊಬ್ಬರು ವಿಶ್ವಾಸಿಕರು ಎಂದರೆ ಸರಿಯಲ್ಲ. ದೇವರಾಜ ನನ್ನ ಮಾವನ ವಿರುದ್ಧ ಪಾಲುವಿಭಾಗ ಕೋರಿ ದಾವಾ ಎಸ್ ನಂಬರ 123/2023 ಹೂಡಿರುತ್ತಾರೆ ಎಂದರೆ ಇರಬಹುದು. ಆಸ್ತಿಯನ್ನು ಈ ಹಿಂದೆ ಮೌಖಿಕ ವಿಭಾಗ ಆಗಿ ಪ್ರತ್ಯೇಕ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿ. ಆರೋಪಿಯ ತಂದೆಯ ಭಾಗದ ಆಸ್ತಿಯನ್ನು ತಂದೆಯ ಸಹೋದರರು ಆರೋಪಿಯ ತಂದೆ ಭಾಗಕ್ಕೆ ದಾಖಲೆ ಮಾಡಿಕೊಟ್ಟಿರುವುದಿಲ್ಲಾ ಎಂದರೆ ಪಹಣಿ ಎಲ್ಲರ ಹೆಸರಿನಲ್ಲಿ ಇದೆ. ಕೇವಲ ಕೆಲವು ಆಸ್ತಿಗಳು ಮಾತ್ರ ಎಲ್ಲರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಹದ್ದು ಬಸ್ತು ಮಾಡಿ ಸರ್ವೆ ಮಾಡಿಸಿ ಪಹಣಿಗಳನ್ನು ಪತ್ಯೇಕ ಮಾಡಿಸಿಲ್ಲಾ ಎಂದರೆ ಸರಿಯಲ್ಲ. ಆರೋಪಿತರ ಹೊಲದ ಬದುವನ್ನು ನನ್ನ ಗಂಡ ಮತ್ತು ಇತರರು ಸೇರಿ ಕೆಡಸಿ ನಾವೇ ಜಗಳ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಗಲಾಟೆಯಲ್ಲಿ ನನ್ನ ಗಂಡ ಮತ್ತು ಮಾವನಿಗೆ ರಕ್ತ ಗಾಯಗಳು ಆಗಿರುತ್ತದೆ. ರಾಡಿನ ಮೇಲೆ ರಕ್ತದ ಕಲೆ ಇಲ್ಲಾ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ರಲ್ಲಿ ರಕ್ತದ ಕಲೆ ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ಮತ್ತು 2 ರ ಯಾವ ಭಾಗ ದಿಂದ ಹೊಡೆದಿರುತ್ತಾರೆ ಎಂದರೆ ಹೇಳಲು ಆಗುವುದಿಲ್ಲಾ. ಮು ಮಾ 1 ಮತ್ತು 2 ರಿಂದ ಆರೋಪಿತರಿಗೆ ಹಲ್ಲೆ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. ಆರೋಪಿತರು ನನ್ನ ಗಂಡನಿಗೆ ನನ್ನ ಮಾವನಿಗೆ ಮು ಮಾ 1 ಮತ್ತು 2 ರಿಂದ ಹಲ್ಲೆ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. ಆರೋಪಿತರು ಕೈ ತೋಳಿಗೆ ಕಚ್ಚಿಲ್ಲಾ ಗುದ್ದಿಲ್ಲಾ ಗಾಯಪಡಿಸಿಲ್ಲಾ ಜೀವ ಬೆದರಿಕೆ ಹಾಕಿರುವುದಿಲ್ಲಾ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ರಕ್ತಗಾಯಪಡಿಸಿಲ್ಲಾ ಬಟ್ಟೆಗೆ ಕೂಡ ರಕ್ತ ಆಗಿರುವುದಿಲ್ಲಾ ಎಂದರೆ ಸರಿಯಲ್ಲ. ಪ್ರಕರಣಕ್ಕೆ

ಸಿ ಸಿ ನಂಬರ 264/2023

| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |
|---|---|---|---|

ಸಂಬಂಧಿಸಿದಂತೆ ನಾನು ಪೋಲೀಸರಿಗೆ ಮರು ಹೇಳಿಕೆ ಕೊಟ್ಟಿರುವುದಿಲ್ಲಾ. ಪೋಲೀಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲಾ. ಪೋಲೀಸ ಠಾಣೆ ಯಲ್ಲಿಯೇ ಅವುಗಳನ್ನು ಜಪ್ತು ಮಾಡಿ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೂ ಆರೋಪಿತರಿಗೆ ಪಿತ್ರಾರ್ಜಿತ ಭಾಗಕ್ಕೆ ಮತ್ತು ಆಸ್ತಿ ಹದ್ದು ಬಸ್ತಿಗೆ ವಿವಾದ ಇರುವ ಕಾರಣ ಆರೋಪಿತರಿಗೆ ನಾವೇ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ವಿಷಯಕ್ಕೆ ಸಂಬಂಧಿಸಿದಂತೆ ಅರವಿಂದಗೌಡ ಮತ್ತು ರಾಮನಗೌಡ ರವರ ಸಲಹೆ ಪಡೆಯುತ್ತೇವೆ ಎಂದರೆ ಸರಿಯಲ್ಲ. ಸದರಿಯವರಿಂದ ಸಲಹೆ ಪಡೆದು ನಾನು ಪ್ರಕರಣವನ್ನು ದಾಖಲಿಸಿ ಪೋಲೀಸರಿಗೆ ಪ್ರಭಾವ ಬೀರಿ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಮತ್ತು ಮಾವನಿಗೆ ಮಾರಣಾಂತಿಕ ಗಾಯಗಳು ಆಗಿತ್ತು. ದೂರಿನಲ್ಲಿ ಮಾರಣಾಂತಿಕ ಗಾಯ ಆದ ಬಗ್ಗೆ ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜೊತೆ ಬಂದ ವ್ಯಕ್ತಿಗಳ ಪ್ರಭಾವ ದಿಂದ ಪೋಲೀಸರು ಕಲಂ 307 ದಾಖಲಿಸಿ ಆರೋಪಿತರನ್ನು ಒಂದು ತಿಂಗಳು ಜೈಲಿನಲ್ಲಿ ಇರಿಸಿರುತ್ತಾರೆ ಎಂದರೆ ಸರಿಯಲ್ಲ. ದುರುದ್ದೇಷ ದಿಂದ ಕಲಂ 307 ಅನ್ವಯ ಆಗುವಂತೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ವೈದ್ಯರು ತೀವ್ರಸ್ವರೂಪದ ಗಾಯ ಇರುವ ಬಗ್ಗೆ ಪ್ರಮಾಣ ಪತ್ರ ಕೊಟ್ಟಿರುವುದಿಲ್ಲಾ ಎಂದರೆ ಸರಿಯಲ್ಲ. ದುರುದ್ದೇಷ ದಿಂದ ದಾವಣಗೆರೆ ಆಸ್ಪತ್ರೆಯಲ್ಲಿ ಗಾಯಾಳುವನ್ನು ದಾಖಲಿಸಿ ಆರೋಪಿತರನ್ನು ಜೈಲಿಗೆ ಹೋಗುವಂತೆ ನೋಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದುರುದ್ದೇಷ ಪೂರಕವಾಗಿ ಪ್ರಕರಣ ದಾಖಲಿಸಿ ಆರೋಪಿತರಿಗೆ ಜೈಲಿನಲ್ಲಿ ಇರಿಸಿದ ಕಾರಣ ಅವರಿಗೆ ನಷ್ಟ ಪರಿಹಾರ ಕೊಡಲು ನಾನು ಬಾಧ್ಯಸ್ಥಳು ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಸುವರ್ಣಮ್ಮ ಕೋಂ ಲೋಕಪ್ಪರವರನ್ನು ಸೇರಿಸಿ ದೂರು ಕೊಟ್ಟಿದ್ದೆ.

ಸಿ ಸಿ ನಂಬರ 264/2023

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ದೋಷರೋಪಣ ಪಟ್ಟಿಯಲ್ಲಿ ಸುವರ್ಣಮ್ಮನನ್ನು ಪೋಲೀಸರು ಕೈ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸುವರ್ಣಮ್ಮ ನ್ಯಾಯಾಲಯಕ್ಕೆ ಹಾಜರಾಗುತ್ತಿಲ್ಲಾ ಎಂದರೆ ನನಗೆ ಗೊತ್ತಿಲ್ಲಾ. ನನ್ನ ದೂರು ಸೃಷ್ಟಿತವಾದ ದೂರು ಆಗಿದ್ದು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ. ದೂರಿಗೆ ಸಂಬಂಧಿಸಿದಂತೆ ನಾನು ಮತ್ತು ಸಾಕ್ಷಿದಾರರು ಪೋಲೀಸರು ಶಾಮೀಲಾಗಿ ಆರೋಪಿತರ ವಿರುದ್ದ ಸುಳ್ಳು ದೂರು ದಾಖಲಿಸಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.